ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 23 ॥Udp/1263/2015-17 || R.NO.50495/91 ॥ ತಾರೀಕು : 20–06–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

# ಕುಂದಾಪುರಕ್ಕೆ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಕೊಲ್ಲೂರಿನಲ್ಲಿ ಶ್ರೀ ಮೂಕಾಂಬಿಕೆಯ ದರ್ಶನ



ಉಡುಪಿ ಶ್ರೀ ಕೃಷ್ಣ ದರ್ಶನಕ್ಕೆ ಆಗಮಿಸಿದ ರಾಷ್ಟ್ರಪತಿ ಪ್ರಣವ್ ಮುಖರ್ಜಿ, ಪೇಜಾವರ ಮಠಾಧೀಶರೊಂದಿಗೆ





ಕೊಲ್ಲೂರು ಶ್ರೀ ಮೂಕಾಂಬಿಕೆಯ ದರ್ಶನಕ್ಕೆ ಆಗಮಿಸಿದ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರಿಗೆ ಶ್ರೀ ದೇವಿಯ ದರ್ಶನದ ಸಂದರ್ಭದಲ್ಲಿ ಶ್ರೀ ಕ್ಷೇತ್ರದ ಬಗ್ಗೆ ವಿವರಣೆಗಳನ್ನು ನೀಡುತ್ತಿರುವ ಮುಖ್ಯಅರ್ಚಕರಾದ ನರಸಿಂಹ ಅಡಿಗ, ಶ್ರೀಧರ ಅಡಿಗ ಮುಂತಾದವರು.



ಕೊಲ್ಲೂರಿನಲ್ಲಿ ರಾಷ್ಟ್ರಪತಿಯವರಿಗೆ ಪೂರ್ಣಕುಂಭ ಸ್ವಾಗತ



ಕೊಲ್ಲೂರು ಕ್ಷೇತ್ರದಲ್ಲಿ ದೇವಾಲಯದ ಸಂಪ್ರದಾಯಕ್ಕೆ ತಕ್ಕಂತೆ ಸಾಂಪ್ರದಾಯಿಕ ಉಡುಪಿನಲ್ಲಿ ರಾಷ್ಟ್ರಪತಿ ದೇವಾಲಯವನ್ನು ಪ್ರವೇಶಿಸುತ್ತಿರುವುದು.

ನಾಲ್ಕು ದಶಕದ ನಂತರ ಕುಂದಾಪುರ ತಾಲ್ಲೂಕಿಗೆ ಭಾರತದ ರಾಷ್ಟ್ರಪತಿಯೊಬ್ಬರು ಆಗಮಿಸಿದರು. ರಾಷ್ಟ್ರಪತಿಯೊಬ್ಬರು ಆಗಮಿಸುವಾಗ ವಾತಾವರಣ ಹೇಗಿರುತ್ತದೆ ಎಂಬ ಅರಿವು ಜನರಿಗಾಯಿತು. ರಾಷ್ಟ್ರಪತಿ ಪ್ರಣವ್ ಮುಖರ್ಜಿ ಬಿಗು ಬಂದೋಬಸ್ತಿನಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ನಡುವೆ ಸಾಗುವ ದೃಶ್ಯವನ್ನಷ್ಟೇ ಜನಸಾಮಾನ್ಯರು ಕಂಡರು. ರಾಷ್ಟ್ರಪತಿಗಳು ಜಗನ್ಮಾಥೆಯ ದರ್ಶನ ಪಡೆದರು ಎಂಬ ಸುದ್ಧಿ, ಮಾಧ್ಯಮಗಳ, ಸಾಮಾಜಿಕ ಜಾಲ ತಾಣಗಳಲ್ಲಿ ಪ್ರಕಟವಾದ ಛಾಯಾಚಿತ್ರಗಳಿಂದಲೇ ಅವರು ಅರಿಯುವಂತಾಯಿತು.

ಅಂದು ಅದಿತ್ಯವಾರ ಆದುದರಿಂದ ವ್ಯವಹಾರಸ್ಥರು, ಜನಸಾಮಾನ್ಯರು ಬಚಾವ್. ಮದುವೆ, ಸಮಾರಂಭಗಳೂ ಹೆಚ್ಚು ಇಲ್ಲದಿರುವುದರಿಂದ ಪೋಲಿಸರು ಸಮಾಧಾನ ಪಟ್ಟುಕೊಳ್ಳುವಂತಾಯಿತು. ವಾಹನ ಸಂಚಾರ ತಡೆ, ಬಸ್ಸುಗಳ ಸುಗಮ ಸಂಚಾರಕ್ಕೆ ತೊಂದರೆಯಾದರೂ ಇತರ ಸಾರ್ವಜನಿಕರು ತಮ್ಮ ವಾಹನಗಳೊಂದಿಗೆ ತಾಳ್ಮೆಯಿಂದಲೇ ಕಾದರು.

ಉಡುಪಿಗೆ ಬೆಳಿಗ್ಗೆ ಆಗಮಿಸಿ ಶ್ರೀ ಕೃಷ್ಣನ ದರ್ಶನ ಪಡೆದ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಕೊಲ್ಲೂರು ಶ್ರೀ ಮೂಕಾಂಬಿಕಾ ದರ್ಶನಕ್ಕೆ ನಿಗದಿಯಂತೆ ಮಧ್ಯಾಹ್ನ 3.30 ಕ್ಕೆ ಪಡೆದರು.

ಕೊಲ್ಲೂರು ದೇಗುಲದಲ್ಲಿ ಪೂರ್ಣಕುಂಭ ಸ್ವಾಗತ ಪಡೆದ ರಾಷ್ಟ್ರಪತಿ ಪ್ರಣವ ಮುಖರ್ಜಿ ಪಂಚೆ ಮತ್ತು ಶಾಲು ಧರಿಸಿ ಶ್ರೀ ದೇವಿಯ ದರ್ಶನ ಪಡೆದರು.

ಕರ್ನಾಟಕದ ಸಚಿವರಾದ ಕೆ.ಜೆ.ಜಾರ್ಜ್, ರುದ್ರಪ್ಪ ಲಮಾಣಿ, ಪ್ರಮೋದ್ ಮಧ್ವರಾಜ್, ಶಾಸಕ ಗೋಪಾಲ ಪೂಜಾರಿ ಉಪಸ್ಥಿತರಿದ್ದರು.

ಐ.ಜಿ.ಪಿ.ಪಿ.ಹರಿಹರ್, ಎಸ್.ಪಿ. ಬಾಲಕೃಷ್ಣ, ಜಿಲ್ಲಾಧಿಕಾರಿ, ಪ್ರಿಯಾಂಕ ಮೇರಿ ಫ್ರಾನ್ಸಿಸ್, ಎ.ಸಿ., ಶಿಲ್ಪಾನಾಗ್, ಎಡಿಸಿ ಅನುರಾಧ, ಕೊಲ್ಲೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ಜನಾರ್ಧನ್, ಉಪ ಕಾರ್ಯ ನಿರ್ವಾಹಣಾಧಿಕಾರಿ ಕೃಷ್ಣಮೂರ್ತಿ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ವಂಡಬಳ್ಳಿ ಜಯರಾಮ ಶೆಟ್ಟಿ, ರಮೇಶ್ ಗಾಣಿಗ, ರಾಜೇಶ ಕಾರಂತ, ಅಂಬಿಕಾ ದೇವಾಡಿಗ, ನರಸಿಂಹ ಹಳಿಗೇರಿ, ಅಭಿಲಾಶ್ ಜೊತೆಗಿದ್ದರು.

ಮುಖ್ಯ ಅರ್ಚಕರಾದ ನರಸಿಂಹ ಅಡಿಗ, ಶ್ರೀಧರ ಅಡಿಗ, ಗೋವಿಂದ ಅಡಿಗ, ಮಂಜುನಾಥ ಅಡಿಗ, ರಾಮಚಂದ್ರ ಅಡಿಗ, ಅವರ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನ ನಡೆಯಿತು.

## ಪೋಲಿಸರೇ ಪೋಲಿಸರು

ರಾಷ್ಟ್ರಪತಿಗಳು ಹೆದ್ದಾರಿ ಮಾರ್ಗದಲ್ಲಿ ಕೊಲ್ಲೂರಿಗೆ ಸಾಗುತ್ತಾರೆ ಎಂದು ನಿಶ್ಚಯಗೊಂಡಂದಿನಿಂದ ಕುಂದಾಪುರಕ್ಕೆ ಹಲವು ಪೋಲಿಸ್ ವ್ಯಾನ್‌ಗಳು ಆಗಮಿಸಿದವು. ಕುಂದಾಪುರದ ಕೆಲವು ಕಲ್ಯಾಣ ಮಂಟಪಗಳು, ಕುಂದಾಪುರ ಸರಕಾರಿ ಪ.ಪೂ. ಕಾಲೇಜಿನ ಕಲಾಮಂದಿರ ಪೋಲಿಸರ ವಾಸ್ತವ್ಯಕ್ಕೆ ನೀಡಲಾಗಿತ್ತು.

ಮುಂಜಾನೆಯಿಂದಲೇ ಹೆದ್ದಾರಿ ಬದಿಯಲ್ಲೆಲ್ಲಾ ಪೋಲಿಸರು ಕಾಣುತ್ತಿದ್ದರು. ಪೋಲಿಸ್ ವಾಹನಗಳ ಓಡಾಟ ಸಾರ್ವಜನಿಕರ ಕುತೂಹಲಕ್ಕೂ ಕಾರಣವಾಗಿತ್ತು. ಮಧ್ಯಾಹ್ನ ರಾಷ್ಟ್ರಪತಿಗಳು ಕೊಲ್ಲೂರಿಗೆ ಸಾಗುವಾಗ ಎಲ್ಲೆಡೆ ವಾಹನ ಸಂಚಾರ ನಿಲುಗಡೆಗೆ ಪೋಲಿಸ್ ಪಡೆಗಳು ಮುತುವರ್ಜಿ ವಹಿಸಿದವು. ಭರಭರನೇ ವಾಹನಗಳು ಅತೀ ವೇಗದಲ್ಲಿ ಸಾಗುತ್ತಾ ಹೋದಾಗ ಹೆಚ್ಚಿನವರಿಗೆ ರಾಷ್ಟ್ರಪತಿಗಳು ಯಾವ ವಾಹನದಲ್ಲಿದ್ದಾರೆ ಎಂದೇ ಅರಿವಾಗಲಿಲ್ಲ!

## ವಿಶ್ವಯೋಗ ದಿನಾಚರಣೆ



ವಿಶ್ವಯೋಗ ದಿನಾಚರಣೆಯ ಅಂಗವಾಗಿ ಜೂ.21 ರಂದು ಕುಂದಾಪುರದಲ್ಲಿ ಯೋಗ ಕಾರ್ಯಕ್ರಮ ನಡೆಸಲು ಹಲವು ಸಂಘಟನೆಗಳು ಸಿದ್ದತೆ ನಡೆಸಿವೆ. ಈಗಾಗಲೇ ಮೇ 21 ರಿಂದ ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಯೋಗ ಆರೋಗ್ಯ ಶಿಬಿರ ನಡೆಯುತ್ತಿದೆ. ಕುಂದಾಪುರದ ಯೋಗ ಬಂಧು ಕುಂದಾಪುರ , ಪತಂಜಲಿ ಯೋಗ, ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಕೇಂದ್ರರವರು 21 ರಂದು ಸಾರ್ವಜನಿಕ ಯೋಗಪ್ರದರ್ಶನ ಹಾಗೂ ಮಾಹಿತಿ ಶಿಬಿರಗಳನ್ನು ಏರ್ಪಡಿಸಿದ್ದಾರೆ.




ಅಸ್ಸಾಂ, ಡಾರ್ಜಲಿಂಗ್, ನೀಲಗಿರಿ ಚಹಾ ತೋಟಗಳ, ಚಹಾ ಗಿಡಗಳ ಚಿಗುರಿನಿಂದ ತಯಾರಿಸಿದ ಶುದ್ಧ ಚಹಾ,
35 ವರ್ಷಗಳಿಂದ ಮಲೆನಾಡಿನಲ್ಲಿ ಮನೆಮಾತಾಗಿದೆ. ಶುದ್ಧ 'ಚಿಗುರ್ ಚಹಾ' ಈಗ ಕರಾವಳಿಯಲ್ಲೂ ಲಭ್ಯ.
ಯಾವುದೇ ಬೆರೆಕೆ ಇಲ್ಲದ ಕೇವಲ ಚಹಾ ಚಿಗುರಿನ 'ಚಿಗುರ್ ಚಹಾ' ಸವಿಯಿರಿ





ಕುಂದಾಪುರ – ಕಾರ್ಕಳ – ಉಡುಪಿ ತಾಲ್ಲೂಕುಗಳಲ್ಲಿ
ಪ್ರಾದೇಶಿಕ ವಿತರಕರು ಬೇಕಾಗಿದ್ದಾರೆ
ಸಂಪರ್ಕಿಸಿರಿ : 9844867231
ಚಿಗುರ್ ಚಹಾ

